

ಸೇನಾ ಕ್ಯಾಂಪ್

ಪಾಲಿಗಂತೂ ಅದು ಪ್ರಪಂಚದ ಅತ್ಯುತ್ತಮ ರಸ್ತೆ. ನಿರ್ಜನ ಪರ್ವತಗಳು, ಅಲ್ಲಲ್ಲಿ ಕಾಣುವ ಯಾಕ್‌ಗಳು, ಕಾಡು ಕುದುರೆಗಳು, ಪುಟ್ಟ ಟೆಡ್ಡಿ ಬೇರ್‌ನಂತಹ ಪ್ರಾಣಿಗಳು. ನೇರವಾಗಿ ಬೈತಲೆ ತೆಗೆದಂತೆ ಸಾಗುವ ಆ ರಸ್ತೆಯಲ್ಲಿ ತಂಗ್ಲಂಗ್ ಲಾ ಎಂಬ ಪ್ರದೇಶವನ್ನು ತಲುಪಿದೆವು.

ಅತೀ ಎತ್ತರದ ಪ್ರದೇಶವಾದ್ದರಿಂದ ಅಲ್ಲಿನ ತಾಪಮಾನ ಕೇವಲ ಒಂದೆರಡು ಡಿಗ್ರಿಯಷ್ಟಿತ್ತು. ಆಮ್ಲಜನಕವೂ ಕಡಿಮೆ ಇತ್ತು. ಮೊಬೈಲ್ ನೆಟ್‌ವರ್ಕ್ ಕೂಡಾ ಇರಲಿಲ್ಲ. ಅಷ್ಟರಲ್ಲೇ ಮಳೆ ಶುರುವಾಯಿತು. ಹಿಂದೆ ಉಳಿದವರು ಬಂದೇ ಬರುತ್ತಾರೆ ಎಂದು ನಾವು ಮುಂದಕ್ಕೆ ಹೊರಟೆವು. ಜೋರು ಮಳೆಯಲ್ಲೇ ನಮ್ಮ ಪ್ರಯಾಣ.

ದಾರಿ ಮಧ್ಯೆ ಪೆಟ್ರೋಲ್ ಖಾಲಿಯಾಯಿತು. ಗಾಳಿ ಮಳೆಗೆ ಕ್ಯಾನ್‌ನಿಂದ ಪೆಟ್ರೋಲ್ ತೆಗೆದು ಟ್ಯಾಂಕ್‌ಗೆ ಸುರಿಯಲು ಆಗುತ್ತಿರಲಿಲ್ಲ. ಅಷ್ಟರಲ್ಲೇ ಭಾರತೀಯ ಸೇನೆಯ ಇಬ್ಬರು ಯೋಧರು ಕಾಣಿಸಿಕೊಂಡು ನಮ್ಮ ನೆರವಿಗೆ ಬಂದರು. ಅವರೇ ಪೆಟ್ರೋಲನ್ನು ತುಂಬಿಸಿ ಕೊಟ್ಟರು. ಲೇಹ್ ತಲುಪುವಷ್ಟರಲ್ಲಿ ರಾತ್ರಿಯಾಗಿತ್ತು.

ಲೇಹ್‌ನಿಂದ ನುಬ್ರಾ ಕಣಿವೆಯತ್ತ ಪ್ರಯಾಣ ಬೆಳೆಸಿದೆವು. ದಾರಿಯಲ್ಲಿ ಎದುರಾದದ್ದು 'ಖಾರ್ದುಂಗ್ ಲಾ'. ವಿಶ್ವದ ಅತ್ಯಂತ ಎತ್ತರದ ರಸ್ತೆ (World's highest motorable road). ಅಲ್ಲಿಯೇ ಬಾರ್ಡರ್ ರೋಡ್ಸ್ ಆರ್ಗನೈಸೇಷನ್ (BRO) ನವರು ಹಾಕಿರುವ ಸಮುದ್ರ ಮಟ್ಟದಿಂದ 18,380 ಅಡಿ ಎತ್ತರವಿದೆ ಎನ್ನುವ ಸೂಚನಾ ಫಲಕವಿದೆ. ಕರ್ನಾಟಕದ ಪ್ರವಾಸಿಗರು ಕಟ್ಟಿ ಹೋಗಿದ್ದ ಕನ್ನಡ ಬಾವುಟವನ್ನು ನೋಡಿ ಖುಷಿಯಾಯಿತು. ಹುಬ್ಬಳ್ಳಿ ಮತ್ತು ದಾವಣಗೆರೆಯ ಇಬ್ಬರು ಹುಡುಗರೂ ಸಿಕ್ಕಿದರು. ಕನ್ನಡಿಗರನ್ನು ಕಂಡು ಅದೆಷ್ಟು ಖುಷಿ! ಆ ಸ್ಥಳದಲ್ಲಿ 25 ನಿಮಿಷಕ್ಕಿಂತ ಹೆಚ್ಚು ಇರಬಾರದೆಂಬ ಫಲಕಗಳು ನಮ್ಮನ್ನು ಅಲ್ಲಿಂದ ಬೇಗ ಹೊರಡಿ ಎಂದು ಹೇಳುತ್ತಿದ್ದವು. ಆಮ್ಲಜನಕದ ಕೊರತೆಯ ಜಾಗವಾದ್ದರಿಂದ ಅನಿವಾರ್ಯವೂ ಆಗಿತ್ತು.

ಡಿಸ್ಕಿಟ್ ಗೊಂಪಾ ಎಂಬ 14ನೇ ಶತಮಾನದ ಬೌದ್ಧ ಧಾರ್ಮಿಕ ಕ್ಷೇತ್ರಕ್ಕೆ ಭೇಟಿ ನೀಡಿದೆವು. 32 ಮೀಟರ್ ಎತ್ತರದ ಮೈತ್ರೇಯ ಬುದ್ಧನನ್ನು ನೋಡಿ ಮೂಕವಿಸ್ಮಿತರಾದೆವು. ನುಬ್ರಾ ಕಣಿವೆ ಸಮೀಪಿಸುತ್ತಿದ್ದಂತೆಯೇ ಎದುರುಗೊಂಡದ್ದು ಒಂದು ಮರಳುಗಾಡು! ಇನ್ನೂ ದೊಡ್ಡ ಅಚ್ಚರಿ ಎಂದರೆ ಎರಡೆರಡು ಡುಬ್ಬಗಳಿರುವ



ಬೆಟ್ಟದಾ ಮೇಲೊಂದು ಮನೆಯ ಮಾಡಿ